OS No. 118/2010 PW.1

ಅಸಲು ದಾವೆ ಸಂಖ್ಯೆ -118/2010
ಪಿ.ಡಬ್ಲ್ಯೂ - 01
ದಿನಾಂಕಃ 18-12-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಮಧ್ಯಂತರ 59 ಮತ್ತು 60 ರಲ್ಲಿ ಆದ ಆದೇಶದ ಮೇರೆಗೆ ಮುಂದುವರೆದ ಪಾಟೀ ಸವಾಲುಃ**
**1 ಮತ್ತು 2 ನೇ ಪ್ರತಿವಾದಿ ಪರ ಶ್ರೀ. ಎಸ್ ಕೆ ವಕೀಲರಿಂದ**

ನಿಮ್ಮ ಜನ್ಮ ದಿನಾಂಕ ಹೇಳಲು ಆಗುತ್ತದೆಯಾ ಎಂದರೆ ದಿಃ 30-01-1958. ನೀವು ನಿಮ್ಮ ವಾದ ಪತ್ರದ ಜೊತೆ ಒಂದು ವಂಶಾವಳಿಯನ್ನು ಸಲ್ಲಿಸಿದ್ದು ಅದಕ್ಕೆ ಯಾರು ಮಾಹಿತಿ ನೀಡಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ಪರಿಶೀಲಿಸಿ ತಲಾಟಿಯವರು ಪಂಚಾಯದಸ್ತ ಮಾಡಿ ನೀಡಿರುತ್ತಾರೆ. ನೀವು ಸಲ್ಲಿಸಿರುವ ಸದರಿ ವಂಶಾವಳಿಯ ಬಗ್ಗೆ ನಿಮಗೆ ವೈಯಕ್ತಿಕವಾಗಿ ಮಾಹಿತಿ ಇದೆಯಾ ಎಂದರೆ ಇದೆ. 1 ನೇ ಪ್ರತಿವಾದಿಯ ತಂದೆಯ ಹೆಸರು ಮೋಹಿಜುದ್ದಿನಖಾನ ಬಿರಾದಾರ ಎಂದರೆ ಸರಿ. ಸದರಿ ಮೋಹಿಜುದ್ದಿನಖಾನ ಬಿರಾದಾರ ಅವರು ಸಾಹೇಬಖಾತು ರವರ ಮಗ ಎಂದರೆ ಸರಿ. ಸಾಹೇಬಖಾತು ಮೊಹಬೂಬಅಲಿಖಾನ ರವರ ಸಹೋದರಿ ಎಂದರೆ ಮಲಸಹೋದರಿ ಇರುತ್ತಾರೆ. ಸದರಿ ಸಾಹೇಬಖಾತು ನವಾಜಖಾತು ರವರಿಗೆ ಏನಾಗಬೇಕು ಎಂದರೆ ನವಾಜ ಖಾತು ರವರ ತಂಗಿಯ ಮಗಳು ಸಾಹೇಬಖಾತು ಇರುತ್ತಾರೆ. ನವಾಜಖಾತು ಮತ್ತು ಸಾಹೇಬಖಾತು ಇಬ್ಬರು ಮಹ್ಮದ ಅಕ್ಬರಖಾನ ರವರ ಮಕ್ಕಳು ಮತ್ತು ಅಕ್ಕತಂಗಿಯರು ಆಗಿರುತ್ತಾರೆ ಎಂದರೆ ಸಾಹೇಬಖಾತು ಮೊದಲನೇ ಹೆಂಡತಿಯ ಮಗಳು ನವಾಜಖಾತು ಎರಡನೇ ಹೆಂಡತಿಯ ಮಗಳು ಇರುತ್ತಾರೆ. 1 ನೇ ಪ್ರತಿವಾದಿ ನವಾಜಖಾತುರವರಿಗೆ ಸಹೋದರಿಯ ಮೊಮ್ಮಗಳು ಆಗಬೇಕು ಎಂದರೆ ಸಾಹೇಬಖಾತುವಿನ ಮಗನ ಮಗಳು ಆಗುತ್ತಾರೆ. ವಾದ ಪತ್ರದ ವಂಶಾವಳಿಯನ್ನು ತಯಾರಿಸಲು ನೀವು ಮತ್ತು ಇತರೇ ವಾದಿಯರು ಸೇರಿ ಮಾಹಿತಿ ನೀಡಿದ್ದೀರಾ ಎಂದರೆ ತಲಾಟಿಯವರು ಪಂಚಾಯದಸ್ತ ಮಾಡಿ ನೀಡಿರುತ್ತಾರೆ. ವಾದ ಪತ್ರದ ಜೊತೆ ಸಲ್ಲಿಸಿರುವ ವಂಶಾವಳಿಯನ್ನು ಸಾಕ್ಷಿಗೆ ತೋರಿಸಿ ಈ ವಂಶಾವಳಿಯನ್ನು ತಲಾಟಿಯವರು ಪಂಚಾಯದಸ್ತ ಮಾಡಿದ ವಂಶಾವಳಿ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಿಮ್ಮ ವಂಶಾವಳಿಯಲ್ಲಿ ದುಲಾಖಾನ ಮತ್ತು ಮುಬಾರಿಸಖಾನ ಎಂದು ತೋರಿಸಿದ್ದು ಅವರು ಯಾರ ಮಕ್ಕಳು ಎಂದರೆ ಸಾಕ್ಷಿಯು ವಂಶಾವಳಿಯನ್ನು ಪರಿಶೀಲಿಸಿ ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದುಲಾಖಾನ ಮತ್ತು ಮುಬಾರಿಸಖಾನ ತಾಯಿಯ ಹೆಸರು ಹೇಳಲು ಆಗುತ್ತದೆಯಾ ಎಂದರೆ ನನಗೆ ಗೊತ್ತಿಲ್ಲ. ಇತರೇ ವಾದಿಗಳಿಗೆ

ದುಲಾಖಾನ ಮತ್ತು ಮುಬಾರಿಸಖಾನ ರವರ ತಂದೆ-ತಾಯಿಯ ಹೆಸರು ಗೊತ್ತಿದೆಯಾ ಎಂದರೆ ಅವರಿಗೆ ಗೊತ್ತಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ದುಲಾಖಾನ ಮತ್ತು ಮುಬಾರಿಸಖಾನ ರವರ ತಂದೆಯವರಿಗೆ ಎಷ್ಟು ಜನ ಮಕ್ಕಳು ಇದ್ದರು ಎಂದರೆ ಇಬ್ಬರು ಮಕ್ಕಳು ಇದ್ದರು. ಅವರಿಗೆ ಇಬ್ಬರು ಮಕ್ಕಳು ಎಂದು ನಿಮಗೆ ಹೇಗೆ ಗೊತ್ತಾಯಿತು ಎಂದರೆ ತಲಾಟಿಯವರು ಪಂಚಾಯದಸ್ತ ಮಾಡಿ ಹೇಳಿದ ಪ್ರಕಾರ ಗೊತ್ತಿರುತ್ತದೆ. ಸಾಕ್ಷಿಗೆ ನಿಪಿ- 110 ನ್ನು ತೋರಿಸಿ ಈ ವಂಶಾಯಳಿಯನ್ನು ಕೇಳಿ ಯಾರು ಅರ್ಜಿ ಸಲ್ಲಿಸಿದ್ದರು ಎಂದರ ನಮ್ಮ ಹಿರಿಯರು ಸಲ್ಲಿಸಿರಬಹುದು. ನಿಪಿ- 110 ನ್ನು ತಯಾರು ಮಾಡುವಾಗ ತಲಾಟಿಯವರು ನಿಮಗೆ ಏನಾದರೂ ಕೇಳಿದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ತಲಾಟಿಯವರು ವಂಶಾವಳಿಯನ್ನು ತಯಾರು ಮಾಡಿ ಯಾರಿಗೆ ನೀಡಿದರು ಎಂದರೆ ನಮ್ಮ ಹಿರಿಯರಿಗೆ ನೀಡಿರುತ್ತಾರೆ. ನಿಮ್ಮ ಹಿರಿಯರು ಎಂದರೆ ನಮ್ಮ ಅಣ್ಣ ಮೆಹಬೂಬಅಲಿಖಾನ. ತಲಾಟಿಯವರು ಯಾರು ಯಾರನ್ನು ಕರೆಯಿಸಿ ಪಂಚಾಯದಸ್ತ ಮಾಡಿದ್ದಾರೆ ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ಸರಿ.

ನಿಮ್ಮ ತಂದೆಯವರು ಹೆಸರು ಏನು ಎಂದರೆ ದಿಲೇರಖಾನ ಇರುತ್ತದೆ. ಸಾಕ್ಷಿಗೆ ತಾನು ಸಲ್ಲಿಸಿರುವ ವಂಶಾವಳಿಯನ್ನು ತೋರಿಸಿ ಸದರಿ ದಿಲೇರಖಾನರವರ ತಂದೆ ಯಾರು ಎಂದರೆ ರೆಹಮಾನಖಾನ ಎಂದು ನುಡಿಯುತ್ತಾರೆ. ರೆಹಮಾನಖಾನ ರವರ ತಂದೆಯ ಹೆಸರು ಏನು ಎಂದರ ಕರೀಮಖಾನ ಇರುತ್ತದೆ. ನೀವು ರೆಹಮಾನಖಾನ ಅವರಿಗೆ ನೋಡಿದ್ದೀರಾ ಎಂದರೆ ನೋಡಿರುವುದಿಲ್ಲ. ಅವರ ಹೆಸರಿನ ಮತ್ತು ಅವರ ಬಗ್ಗೆ ನಿಮಗೆ ಮಾಹಿತಿ ಇದೆ ಎಂದರ ಸರಿ. ಮಾಹಿತಿ ಯಾರು ನೀಡಿದರು ಎಂದರೆ ನಮ್ಮ ಮುತ್ತಜ್ಜ ನೀಡಿರುತ್ತಾರೆ. ಕರೀಮಖಾನ ರವರು ಇದ್ದರು ಅವರ ಹೆಸರಿನಲ್ಲಿ ಆಸ್ತಿ ಇತ್ತು ಎಂದು ತೋರಿಸಲು ಯಾವುದಾದರೂ ದಾಖಲೆ ಇದೆಯಾ ಎಂದರೆ ಮರಣ ಉತಾರ ಇದೆ. ಈ ದಾವೆಯನ್ನು ಸಲ್ಲಿಸುವಾಗ ಕರೀಮಖಾನ ರವರ ಬಗ್ಗೆ ನಿಮಗೆ ಮಾಹಿತಿ ಇತ್ತು ಎಂದರೆ ಇತ್ತು. ಅವರ ಹೆಸರು ವಾದ ಪತ್ರದ ಜೊತೆ ಸಲ್ಲಿಸಿದ ವಂಶಾವಳಿಯಲ್ಲಿ ಇಲ್ಲ ಎಂದರೆ ಬರೆದಿಲ್ಲ ಎಂದು ನುಡಿಯುತ್ತಾರೆ.

ಅಹ್ಮದಬಿಬಿ ಮೂಲತಃ ಎಲ್ಲಿಯವರೂ ಎಂದರೆ ಸವಣೂರಿನವರು. ಅವರು ಸವಣೂರಿನವರು ಮತ್ತು ಅವರು ಇಂತಹವರ ಮಗಳು ಎಂದು ತೋರಿಸಲು ಯಾವುದದಾರು ದಾಖಲೆ ಇದೆಯಾ ಎಂದರೆ ಮರಣ ಉತಾರ ಇದೆ. ಸಾಕ್ಷಿಗೆ ನಿಪಿ- 122 ನ್ನು ತೋರಿಸಿದ್ದು ಆ ಮರಣ ಉತಾರ ಇದೇನಾ ನೋಡಿ ಎಂದರೆ ಸಾಕ್ಷಿಯು ಅದನ್ನು ಪರಿಶೀಲಿಸಿ ಹೌದು ಎಂದು ನುಡಿಯುತ್ತಾರೆ. ನಿಪಿ- 122 ರಲ್ಲಿ ಅಹ್ಮದಬಿಬಿ ರವರ ತಂದೆಯ ಹೆಸರು ಏನು ಇದೆ ಎಂದರೆ

ಸಾಕ್ಷಿಯು ಅದನ್ನು ಪರಿಶೀಲಿಸಿ ಅವರ ತಂದೆಯ ಹೆಸರು ಇಲ್ಲ, ಈ ಮೊದಲು ನಾನು ನೋಡಿದ ಮರಣ ಉತಾರದಲ್ಲಿ ಫಿರೋಜಖಾನ ಎಂದು ತಂದೆ ಹೆಸರು ಇತ್ತು. ಹಾಗಾದರೆ ನೀವು ಮೊದಲು ಉತಾರವನ್ನು ನಿಮ್ಮ ವಕೀಲರಿಗೆ ನೀಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಅಹ್ಮದಬಿಬಿ ಫಿರೋಜಖಾನ ರವರ ಮಗಳು ಎಂದು ಕಲ್ಪನೆ ಮಾಡಿಕೊಂಡು ಹೇಳುತ್ತಿದ್ದೀರಾ ಮತ್ತು ಅದಕ್ಕೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಪಿರೋಜಖಾನ ಎಂಬ ವ್ಯಕ್ತಿ ಇದ್ದಾರೆ ಎಂದು ತೋರಿಸಲು ನೀವು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಪಂಚಾಯದಸ್ತ ನೀಡಿರುವ ದಾಖಲೆ ಇರುತ್ತದೆ.

ತಲಾಟಿ ರವರು ನಿಡಿದ ಪಂಚಾಯದಸ್ತ ರವರಿಗೆ ಏನಾದರೂ ಫಿರೋಜಖಾನ ರವರು ಇರುವ ಬಗ್ಗೆ ಯಾವುದಾದರೂ ದಾಖಲೆ ನೀಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಂಶಾವಳಿಯನ್ನು ಪಿ ಡಿ ಓ ಕಡೆಯಿಂದ ಯಾವ ಉದ್ದೇಶಕ್ಕಾಗಿ ತಯಾರು ಮಾಡಿಸಿದ್ದೀರಿ ಎಂದರೆ ನಮ್ಮ ವಂಶಾವಳಿ ನಮಗೆ ಮಾಹಿತಿ ಇರಲಿ ಒಂದು ಮಾಡಿಸಿದ್ದೇವು. ನಿಪಿ- 110 ರ ವಂಶಾವಳಿಯನ್ನು ಯಾವಾಗ ತಯಾರು ಮಾಡಿಸಿದ್ದೀರಿ ಎಂದರೆ 2010 ರಲ್ಲಿ ಮಾಡಿಸಿದ್ದೇವು. ನಿಪಿ- 110 ನ್ನು ದಿಃ 21-07-2012 ರಂದು ತಯಾರು ಮಾಡಿರುತ್ತಾರೆ ಎಂದರೆ 2010 ರಲ್ಲಿ ಇರಬಹುದು ಎಂದು ಹೇಳಿದೇನು.ನಿಪಿ- 110 ನ್ನು ಮಾಡಿಸಿದ ಬಳಿಕ ನಿಮಗೆ ನಿಮ್ಮ ವಂಶಾವಳಿಯ ಬಗ್ಗೆ ಮಾಹಿತಿ ಬಂದಿರುತ್ತದೆ ಎಂದರ ಸರಿಯಲ್ಲ. ಈ ಮೊದಲೇ ಸ್ವಲ್ಪ ಸ್ವಲ್ಪ ಮಾಹಿತಿ ಇತ್ತು.

ನಿಮ್ಮ ಹಿರಿಯರು ಎಂದು ಹೇಳುತ್ತೀರಿ ಅವರು ಯಾರು ಎಂದರೆ ನಮ್ಮ ತಂದೆ- ತಾಯಿ ಇರುತ್ತಾರೆ. ಅವರು ಬಿಟ್ಟು ಬೇರೆ ಯಾರು ಹೇಳಲಿಲ್ಲ ಎಂದರೆ ನಮ್ಮ ತಾಯಿಯ ತಾಯಿ ಲಾಡಲಿಬೇಗಂ ರವರು ಹೇಳಿರುತ್ತಾರೆ. ಲಾಡಲಿಬೇಗಂ ಅವರು ಯಾವಾಗ ತೀರಿಕೊಂಡರು ಎಂದರೆ ನನಗೆ ನೆನೆಪಿಲ್ಲ. ಲಾಡಲಿಬೇಗಂ ರವರು ತೀರಿಕೊಂಡಾಗ ನಿಮಗೆ ಎಷ್ಟು ವಯಸ್ಸಾಗಿತ್ತು ಎಂದರೆ 15-16 ಆಗಿತ್ತು. ಲಾಡಲಿಬೇಗಂ ರವರ ಗಂಡನ ಹೆಸರು ಏನು ಎಂದರೆ ನಿಯಾಜಮಹ್ಮದಖಾನ. ಸದರಿಯವರು ಹೆಸರು ನೀವು ಸಲ್ಲಿಸಿದ ವಾದ ಪತ್ರದ ವಂಶಾವಳಿಯಲ್ಲಿ ನಮೂದು ಇಲ್ಲ ಎಂದರೆ ಸರಿ. ಕರೀಮಖಾನ ರವರು ಎಂದರೆ ಅಹ್ಮದಬಿಬಿ ರವರ ಗಂಡ ಅವರಿಗೆ ಎಷ್ಟು ಜನ ಸಹೋದರರು ಎಂದರೆ ಕರೀಮಖಾನ ರವರನ್ನು ಸೇರಿ 4 ಜನ. ನಿಮ್ಮ ಅಜ್ಜನಾದ ರೇಹಮಾನಖಾನ ರವರಿಗೆ ಎಷ್ಟು ಜನ ಸಹೋದರ ಸಹೋದರಿಯರು ಎಂದರೆ ಅವರಿಗೆ ಸಹೋದರಿ ಲಾಡಲಿಬೇಗಂ ಇರುತ್ತಾರೆ. ನಿಮ್ಮ ಅಜ್ಜ ರೇಹಮಾನಖಾನ ರವರು ಯಾವಾಗ ತೀರಿಕೊಂಡಲು ಎಂದರೆ ನನಗೆ ಗೊತ್ತಿಲ್ಲ. ಅವರನ್ನು ನಾನು ನೋಡಿಲ್ಲ.

ಅವರು ಇಬ್ಬರೇ ಅಣ್ಣತಂಗಿ ಎಂದು ನಿಮಗೆ ಯಾರು ಮಾಹಿತಿ ನೀಡಿದರು ಎಂದರೆ ನಮ್ಮ ಅಜ್ಜಿ ಲಾಡಲಿಬೇಗಂ ನೀಡಿರುತ್ತಾರೆ. ಯಾವಾಗ ಮಾಹಿತಿ ನೀಡಿದರು ಎಂದರೆ ನನಗೆ ಗೊತ್ತಿಲ್ಲ. ಅವರು ಸಾಯುವ ಮುಂಚೆ ನೀಡಿದ್ದರು. ಈ ಕುರಿತು ಅದನ್ನು ಏನಾದರೂ ಬರೆದುಕೊಂಡು ಇಟ್ಟುಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಅಹ್ಮದಬಿಬಿ ರವರು ನೀವು ನೋಡಿಲ್ಲ ಎಂದರೆ ನೋಡಿದ್ದೇನೆ. ಅವರು ತೀರಿಕೊಳ್ಳುವಾಗ ನಿಮಗೆ ಎಷ್ಟು ವಯಸ್ಸು ಇತ್ತು ಎಂದರೆ 7-8 ವರ್ಷ ಇತ್ತು. ಅವರು ಯಾವಮನೆಯಲ್ಲಿ ವಾಸವಿದ್ದರು ಎಂದರೆ ನಾವು ಈಗ ಇರುವ ಮನೆಯಲ್ಲಿ ವಾಸವಿದ್ದರು. ಸದರಿ ಅಹ್ಮದಬಿಬಿ ರವರು ನಿಮಗೆ ವಂಶಾವಳಿಯ ಬಗ್ಗೆ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿ. ಮುಂದುವರೆದು ನಾನು ಚಿಕ್ಕವನಿದ್ದೇನು.

ಲಾಡಲೀಬೇಗಂ ರವರ ಮಗಳು ಸಾಹೇಬಜಾನ ಉರ್ಫ ಸಲಿಮಾಬೇಗಂ ಎಂದರೆ ಸರಿ. ನಿಮ್ಮ ತಾಯಿಯವರು ಯಾವಾಗ ತೀರಿಕೊಂಡು ಎಷ್ಟು ವರ್ಷ ಆಯಿತು ಎಂದರೆ ಈಗಿನಿಂದ 5 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ಈ ದಾವೆಯಲ್ಲಿ ನಿಮ್ಮ ತಾಯಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅವರು ಜೀವಂತ ಇದ್ದಾಗ ಈ ದಾವೆಗೆ ಅವರು ಪಕ್ಷಗಾರರು ಆಗಿದ್ದರು ಎಂದರೆ ನಮಗೆ ಅನ್ನಿಸಲಿಲ್ಲ ಎಂದು ನುಡಿಯುತ್ತಾರೆ. ಅವರಿಗೆ ಅಹ್ಮದಬಿಬಿ ಪಿರೋಜಖಾನ ರವರ ಮಗಳು ಅಲ್ಲ ಎಂದು ಮಾಹಿತಿ ಇಲ್ಲದೆ ಇದ್ದ ಕಾರಣ ಅವರನ್ನು ಅವಶ್ಯಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಾಯಿಗೆ ಎಷ್ಟು ಜನ ಸಹೋದರ ಸಹೋದರಿಯರು ಎಂದರೆ ನಮ್ಮ ತಾಯಿಗೆ ಒಬ್ಬ ತಂಗಿ ಮತ್ತು ತಮ್ಮ ಇರುತ್ತಾರೆ. ತಮ್ಮನ ಹೆಸರು ಏನು ಎಂದರೆ ಅತಾಮೊಹ್ಮದಖಾನ ಇರುತ್ತದೆ. ನಿಮ್ಮ ತಾಯಿಯ ತಂಗಿ ತಾಹೇರಾಬೇಗಂ ಎಂದರೆ ಸರಿ. ವಾದಿ 8 ನೇ ದವರ ತಾಯಿ ಎಂದರೆ ಸರಿ. ತಾಹೇರಾಬೇಗಂ ಯಾವಾಗ ತೀರಿಕೊಂಡರು ಈಗಿನಿಂದ 3 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ಈ ದಾವೆಯಲ್ಲಿ ತಾಹೇರಾಬೇಗಂ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಅವರು ಜೀವಂತ ಇದ್ದಾಗ ಈ ದಾವೆಗೆ ಅವರು ಪಕ್ಷಗಾರರು ಆಗಿದ್ದರು ಎಂದರೆ ನಮಗೆ ಅನ್ನಿಸಲಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಾಯಿ ಮತ್ತು 8 ನೇ ವಾದಿಯ ತಾಯಿ ಜೀವಂತ ಇದ್ದರು ಅವರನ್ನು ಪಕ್ಷಗಾರರನ್ನಾಗಿ ಮಾಡದೇ ಇರುವುದು ಮೋಸ (Fraud) ಇರುತ್ತದೆ ಎಂದರೆ ಸರಿಯಲ್ಲ. ಶೆಹಜಾದ ಬೇಗಂ ರವರ ತಾಯಿ ಸಾಹೇಬಿ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಮಗೆ ಅವಶ್ಯ ಅನ್ನಿಸಲಿಲ್ಲ. ಸದರಿ ಸಾಹೇಬಿ ರವರು ಯಾವಾಗ ತೀರಿಕೊಂಡಲು ಎಂದರೆನನಗೆ ಗೊತಿತಲ್ಲ. ಈ ದಾವೆಯನ್ನು ಸಲ್ಲಿಸುವಾಗ ಅವರು ಜೀವಂತ ಇದ್ದರಾ ಎಂದರೆ ಇದ್ದರು. ಅವರು ಈ ದಾವೆಯನ್ನು ಹೂಡವ ಪೂರ್ವದಲ್ಲಿ

ತೀರಿಕೊಂಡಿದ್ದರು ಎಂದರೆ ನನಗೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿಯು ಈ ಹಿಂದೆ ಅಸಲು ದಾವಾ ಸಂಖ್ಯೆ 171/1984 ನ್ನು ಹೂಡಿದ್ದು ಅದರಲ್ಲಿ ಅವರು ಅವರ ತಾಯಿಯಾದ ಸಾಹೇಬಿ ರವರನ್ನು ಪಕ್ಷಗಾರರನ್ನಾಗಿ ಮಾಡದೇ ಇರುವುದು ಮೋಸ (Fraud) ಆಗುವುದಿಲ್ಲ ಎಂದರೆ ಮುಸ್ತಾಕಖಾನ ರವರು ಮಾಡಬೇಕಿತ್ತು ಎಂದು ನುಡಿಯುತ್ತಾರೆ. ಹಾಗಾದರೆ ಶಹಜಾದ ಬೇಗಂ ರವರು ಯಾವುದೇ ಮೋಸ (Fraud) ಮಾಡಿರುವುದಿಲ್ಲ ಮೋಸ (Fraud) ಮಾಡಿರುತ್ತಾರೆ.

ನಿಪಿ- 110 ನ್ನು ತೋರಿಸಿ ಇದರಲ್ಲಿ ದುಲಾಖಾನ ಮತ್ತು ಮುಬಾರಿಸಖಾನ ರವರನ್ನು ಅಣ್ಣತಮ್ಮಂದಿರು ಎಂದು ತೋರಿಸಿದ್ದೀರಿ ಎಂದರೆ ಸರಿ. ಇವರು ಯಾವಾಗ ಹುಟ್ಟಿದ್ದರು ಯಾವಾಗ ಮರಣ ಹೊಂದಿದ್ದರು ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ. ಅವರು ಎಲ್ಲಿ ವಾಸವಾಗಿದ್ದರು, ಏನು ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರ ಬಗ್ಗೆನಿಮಗೆ ಯಾವುದೇ ರೀತಿ ಮಾಹಿತಿ ಇದೆಯಾ ಎಂದರೆ ಇಲ್ಲ. ದುಲಾಖಾನ ಮತ್ತು ಮುಬಾರಿಸಖಾನ ಎಂಬ ವ್ಯಕ್ತಿಗಳು ಇರುವುದಿಲ್ಲ ಮತ್ತು ಅವರು ಅಣ್ಣ ತಮ್ಮಂದಿರು ಅಲ್ಲ ಎಂದರೆ ತಲಾಟಿಯವರು ಪಂಚಾಯದಸ್ತನಲ್ಲಿ ನಮೂದಿಸಿರುತ್ತಾರೆ. ತಲಾಟಿಯವರು ಪಂಚಾಯದಸ್ತ ಮಾಡಿ ನೀಡಿದ ನಂತರ ನಿಮಗೆ ಅವರ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಮುಂದುವರೆದು ನಮ್ಮ ಹಿರಿಯರು ಸಹ ತಿಳಿಸಿರುತ್ತಾರೆ. ಹಿರಿಯರು ಎಂದರೆ ಯಾರು ಎಂದರೆ ಅವರು ನಮ್ಮ ತಾಯಿ, ಅಜ್ಜಿ ತಿಳಿಸಿರುತ್ತಾರೆ. ಈ ಕುರಿತು ನಿವೇನಾದರೂ ಅದನ್ನು ಬರೆದುಕೊಂಡು ಇಟ್ಟು ಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ವಿಷಯವನ್ನು ನಿಮ್ಮ ತಾಯಿ ಮತ್ತು ನಿಮ್ಮ ಅಜ್ಜಿ ನಿಮಗೆ ಮಾತ್ರ ಹೇಳಿದ್ದರೋ ಅಥವಾ ಬೇರೆ ಯಾರಿಗಾದರೂ ಹೇಳಿದ್ದರಾ ಎಂದರೆ ಎಲ್ಲಾ ಸಹೋದರ ಸಹೋದರಿಯರಿಗೆ ಹೇಳಿದ್ದರು. ಯಾವಾಗ ಹೇಳಿದ್ದರು ಎಂದರೆ ಈಗಿನಿಂದ 10-15 ವರ್ಷದ ಹಿಂದೆ ಹೇಳಿದ್ದರು.

ದುಲಾಖಾನಗೆ ಎಷ್ಟು ಜನ ಮಕ್ಕಳು ಇದ್ದರು ಎಂದರೆ ನೆನೆಪಿಲ್ಲ. ಅವರು ಹೆಸರುಗಳು ನೆನೆಪಿದೆಯಾ ಎಂದರೆ ನೆನೆಪಿಲ್ಲ. ಅವರ ಮೊಮ್ಮಕ್ಕಳು ಎಷ್ಟು ಜನ ಎಂದರೆ ದುಲಾಖಾನ ರವರಿಗೆ ಪಿರೋಜಖಾನ ಎಂಬ ಮಗ, ಪಿರೋಜಖಾನಗೆ ಇಬ್ಬರು ಹೆಣ್ಣು ಮಕ್ಕಳು ಅವರು ಅಹ್ಮದಬಿಬಿ ಮತ್ತು ಹುಸೇನಖಾತು ಇರುತ್ತಾರೆ. ಒಂದೇ ಹೆಂಡತಿಯಿಂದ ಇಬ್ಬರು ಹೆಣ್ಣು ಮಕ್ಕಳು ಜನಿಸಿರುತ್ತಾರೆ ಎಂದರೆ ಒಬ್ಬರೇ ಹೆಂಡತಿ ಇದ್ದರು. ಪಿರೋಜಖಾನ ರವರ ಹೆಂಡತಿ ಹೆಸರು ಏನು ಎಂದರೆ ನನಗೆ ಗೊತ್ತಿಲ್ಲ. ಅವರು ಎಲ್ಲಿ ಇರುತ್ತಿದ್ದರು ಎಂದರೆ ಸವಣೂರನಲ್ಲಿ, ಅವರನ್ನು ನಾನು ನೋಡಿಲ್ಲ. ಪಿರೋಜಖಾನರವರಿಗೆ ಇಬ್ಬರು ಮಕ್ಕಳು ಎಂದು ನಿಮಗೆ ಯಾರು ಮಾಹಿತಿ ನೀಡಿದರು ಎಂದರೆ ನಮ್ಮ ಅಜ್ಜಿ ಲಾಡಲಿಬೆಗಂ ರವರು ನೀಡಿರುತ್ತಾರೆ. ಆಗ

ನಿಮಗೆ ಎಷ್ಟು ವಯಸ್ಸಾಗಿತ್ತು ಎಂದರೆ 10-12 ವಯಸ್ಸಾಗಿತ್ತು. ಅದನ್ನು ಸಹ ಬರೆದುಇಟ್ಟು ಕೊಂಡಿಲ್ಲ ಎಂದರೆ ಸರಿ. ಅವರು ಈ ವಿಷಯವನ್ನು ನಿಮಗೆ ಹೇಳುವಾಗ ಯಾರು ಯಾರು ಇದ್ದರು ಎಂದರೆ ನನ್ನ ಸಹೋದರ ಸಹೋದರಿಯರು ಇದ್ದರು.

ಅಮೀರಾಬಿ ನಿಮ್ಮ ಸಹೋದರಿ ಎಂದರೆ ಸರಿ. ಲಾಡಲಿಬೇಗಂ ರವರು ಪಿರೋಜಖಾನ ರವರ ಬಗ್ಗೆ ಮಾಹಿತಿ ನೀಡುವಾಗ ಅಮೀರಾಬಿ ಇದ್ದರು ಎಂದರೆ ಅವರು ಹುಟ್ಟಿರಲಿಲ್ಲ. ಅಹ್ಮದಬಿಬಿ ಮತ್ತು ಹುಸೇನಖಾತು ರವರ ಬಗ್ಗೆ ನೀವು 10-12 ವರ್ಷದವರಿದ್ದಾಗ ಪಡೆದ ಮಾಹಿತಿಯನ್ನು ಹೊರತುಪಡಿಸಿ ನಿಮಗೆ ಬೇರೆ ಮಾಹಿತಿ ಇಲ್ಲ ಎಂದರೆ ಸರಿ. ಅದನ್ನು ಸಹ ಬರೆದುಇಟ್ಟು ಕೊಂಡಿಲ್ಲ ಎಂದರೆ ಸರಿ. ಅದರ ಬಗ್ಗೆ ಯಾವುದೇ ದಾಖಲೆಯನ್ನು ನೋಡಿಲ್ಲ ಎಂದರೆ ಸರಿ.

ಮುಬಾರಿಸಖಾನ ರವರಿಗೆ ಎಷ್ಟು ಜನ ಮಕ್ಕಳು ಎಂದರೆ ಅಕ್ಬರಖಾನ ಎಂಬ ಒಬ್ಬನೇ ಮಗ. ಇದರ ಬಗ್ಗೆ ಮಾಹಿತಿ ಯಾರು ನೀಡಿದರು ಎಂದರೆ ನಮ್ಮ ಅಜ್ಜಿ ಲಾಡಲಿಬೆಗಂ ರವರು ನೀಡಿರುತ್ತಾರೆ. ತಲಾಟಿ ಪಂಚಾಯದಸ್ತ ಮಾಡಿದ ಮೇಲೆ ಗೊತ್ತಾಗಿರುತ್ತದೆ. ತಲಾಟಿಯವರು ಪಂಚಾಯದಸ್ತ ಮಾಡುವಾಗ ನೀವು ಇದ್ದರಾ ಎಂದರೆ ಇರಲಿಲ್ಲ. ಪಂಚಾಯದಸ್ತ ಮಾಡಲು ಯಾರು ಯಾರು ಮಾಹಿತಿ ನೀಡಿದರು ಎಂದರೆ ಅದು ನನಗೆ ಗೊತ್ತಿಲ್ಲ. ಮೊಹ್ಮದಅಕ್ಬರಖಾನ ರವರ ಹೆಂಡತಿ ಹೆಸರು ಏನು ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಯಾವಾಗ ತೀರಿಕೊಂಡರು ಎಂದು ನಿಮಗೆ ಮಾಹಿತಿ ಇಲ್ಲ ಎಂದರೆ ಸರಿ. ಅವರನ್ನು ನೀವು ನೋಡಿಲ್ಲ ಎಂದರೆ ಸರಿ. ನವಾಜಖಾತು ರವರನ್ನಾದರು ನೋಡಿದ್ದೀರಾ ಎಂದರೆ ಇಲ್ಲ. ಅವರು ಯಾವಾಗ ತೀರಿಕೊಂಡರು ಎಂದರೆ ನಾನು ಹುಟ್ಟುವ ಪೂರ್ವದಲ್ಲಿ ತೀರಿಕೊಂಡಿದ್ದರು. ನವಾಜಖಾತು ರವರು ನಿಮಗೆ ಏನಾಗಬೇಕು ಎಂದರೆ ನಮ್ಮ ಮುತ್ತಜ್ಜಿ ಅಹ್ಮದಬಿಬಿ ರವರಿಗೆ **cousin** sister ಆಗಬೇಕು.

ನವಾಜಖಾತು ಅವರಿಗೆ ಎಷ್ಟು ಆಸ್ತಿ ಇತ್ತು ಎಂದು ನಿಮಗೆ ಯಾವಾಗ ಗೊತ್ತಾಯಿತು ಎಂದರೆ ಅಂದಾಜು 2010 ರಲ್ಲಿ ಗೊತ್ತಾಗಿರುತ್ತದೆ. ಅವರು ಯಾವಾಗ ತೀರಿಕೊಂಡರು ಎಂದು ನನಗೆ ಮಾಹಿತಿ ಇಲ್ಲ. ಅವರ ಬಗ್ಗೆ ನಿಮ್ಮ ತಾಯಿ ಮತ್ತು ಅಜ್ಜಿ ಏನು ಹೇಳಿರುವುದಿಲ್ಲ ಎಂದರೆ ಹೇಳಿದ್ದಾರೆ ಮತ್ತು ಅವರನ್ನು ಭೇಟಿಯಾಗಿ ಬರುತ್ತಿದ್ದರು. ನವಾಜಖಾತು ರವರು ಹುಬ್ಬಳ್ಳಿಯಲ್ಲಿ ಇರುತ್ತಿದ್ದರು. ನವಾಜಖಾತು ಹುಬ್ಬಳ್ಳಿಯಲ್ಲಿ ಇರುತ್ತಿದ್ದರು ಎಂದು ಮತ್ತು ಅವರ ಬಗ್ಗೆ ನಿಮಗೆ ಯಾವಾಗ ಗೊತ್ತಾಯಿತು ಎಂದರೆ ನಾವು ಸಣ್ಣವರಿದ್ದಾಗಲೇ ಗೊತ್ತಿತ್ತು. ನಮ್ಮ ತಾಯಿ ಮತ್ತು ಅಜ್ಜಿ ಯಾವಾಗ ಹೋಗುತ್ತಿದ್ದರು ನನಗೆ ಗೊತ್ತಿಲ್ಲ. ನಿಮ್ಮ ಅಜ್ಜಿ ಲಾಡಲೀ ಬೇಗಂ ರವರು ಮೊದಲು ತೀರಿಕೊಂಡರೋ ಅಥವಾ ನವಾಜಖಾತು ರವರು ಮೊದಲು ತೀರಿಕೊಂಡರು

ಎಂದರೆ ನವಾಜಖಾತು ರವರು ಮೊದಲು ತೀರಿಕೊಂಡಿರುತ್ತಾರೆ. ನೀವು 15 ವರ್ಷದವರಾಗಿದ್ದಾಗ ನವಾಜಖಾತು ರವರು ತೀರಿಕೊಂಡಿದ್ದರಾ ಎಂದರೆ ಹೌದು.

ಸವಣೂರಿನ ಕೆ ಎಸ್ ಆರ್ ಟಿ ಡಿಪೋ, ಅದು ನವಾಜಖಾತು ರವರ ಹೆಸರಿನಲ್ಲಿ ಇತ್ತು ಎಂದು ನಿಮಗೆ ಯಾವಾಗ ಗೊತ್ತಾಯಿತು ಎಂದರೆ ಡಿಪೋ ಆಗುವ ಪೂರ್ವದಲ್ಲಿಯೇ ನನಗೆ ಗೊತ್ತಿತ್ತು. ಡಿಪೋ ದವರು ಆ ಜಾಗವನ್ನು ತೆಗೆದುಕೊಂಡು ಎಷ್ಟು ವರ್ಷ ಆಯಿತು ಎಂದರೆ ಅಂದಾಜು 20 ವರ್ಷ ಆಗಿರುತ್ತದೆ. ಡಿಪೋ ಗೆ ಸಂಬಂಧಿಸಿದಂತೆ ಒಂದು ದಾವೆ ಆಗಿತ್ತು ಅದರಲ್ಲಿ ಪತ್ರಿಕಾ ಪ್ರಕಟಣೆ ಆಗಿದ್ದು ಅದರ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಆದರೆ ಸ್ವಲ್ಪ ಸ್ವಲ್ಪ ಕೇಳಿಕೊಂಡಿದ್ದೇನೆ. ಮಾನ್ಯ ನ್ಯಾಯಾಲಯದ ಮುಂದೆ ಈ ಪ್ರರಕಣ ಬಿಟ್ಟು ಅಸಲು ದಾವಾ ಸಂಖ್ಯೆ 249/2014 ದಾವೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅದು ಮೆಮೊ ಹಾಕಿ ಹಿಂಪಡೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ- 110 ರ ಬಗ್ಗೆ ಯಾವುದೇ ಮಾಹಿತಿ ಮತ್ತು ದಾಖಲೆ ಇಲ್ಲದೆ ತಯಾರು ಮಾಡಿಸಿ ಈ ದಾವೆಯನ್ನು ಹೂಡಿದ ನಂತರ ತಯಾರು ಮಾಡಿಸಿರುತ್ತೀರಿ ಎಂದರೆ ಸರಿಯಲ್ಲ. ನಿಪಿ- 110 ನ್ನು ಈ ಪ್ರಕರಣ ಬಿಟ್ಟು ಬೇರೆ ಎಲ್ಲಿಯೂ ಹಾಜರುಪಡಿಸಿಲ್ಲ ಎಂದರೆ ಸರಿ. ವಾದಿ ನಂ. 13 ರಿಂದ 15 ರವರ ಮನೆ ಪ್ರತಿವಾದಿ 1 ಮತ್ತು 2 ನೇದ್ದವರ ಮನೆಯ ಪಕ್ಕದಲ್ಲಿ ಇದೆ ಎಂದರೆ ಸರಿ. ಈಗಲೂ ಸಹ ಮತ್ತು 100 ವರ್ಷದ ಹಿಂದೆಯೂ ಸಹ ಸದರಿ ಮನೆಗಳು ಅಕ್ಕಪಕ್ಕದಲ್ಲಿಯೇ ಇದ್ದವು ಎಂದರೆ ಸರಿ. ನವಾಜಖಾತು ರವರಿಗೆ ನೀವು ಯಾವುದೇ ರೀತಿಯಿಂದ ನೀವು ಸಂಬಂಧ ಇರುವುದಿಲ್ಲ, ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.

OS No. 118/2010 PW.1